INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
Page No,93-102
Peer -Reviewed, Refereed Journal

# 'ಜನಪದ ಶರಣ ಕಾವ್ಯಗಳು' ಕೃತಿಯಲ್ಲಿ ಸಿದ್ಧರಾಮೇಶ್ವರ

*.ನಟರಾಜು ಎಸ್.[1]
**.ಪ್ರೊ.ವಿಜಯಕುಮಾರಿ ಎಸ್.ಕರಿಕಲ್.[2]

ಡಾ.ಪಿ.ಕೆ.ರಾಜಶೇಖರ್ ಅವರು ಕನ್ನಡ ಜಾನಪದ ವಿದ್ವಾಂಸರಲ್ಲಿ ಪ್ರಮುಖರು. ಜಾನಪದವನ್ನೇ ತಮ್ಮ ಉಸಿರನ್ನಾಗಿಸಿಕೊಂಡಿರುವ ಇವರ 'ಜನಪದ ಶರಣ ಕಾವ್ಯಗಳು' ಅಪರೂಪದ ಕೃತಿ. ಹನ್ನೆರಡನೆಯ ಶತಮಾನದಲ್ಲಿ ಸಾಮಾಜಿಕ ಅಸಮಾನತೆಗಳನ್ನು ಹೋಗಲಾಡಿಸಲು ದುಡಿದ ಬಸವಾದಿ ಶರಣರ ಜೀವನ ಕಥಾನಕಗಳನ್ನು ಜನಪದ ವೃತ್ತಿಗಾಯಕರು ಮನದುಂಬಿ ಹಾಡಿರುವುದನ್ನು ಇಲ್ಲಿ ಕಾವ್ಯರೂಪದಲ್ಲಿ ಸಂಗ್ರಹಿಸಲಾಗಿದೆ. ಬೆಟ್ಟದಬೀಡು ಸಿದ್ಧಶೆಟ್ಟರು, ಇವರ ಸಹಧರ್ಮಿಣಿ ಸುಬ್ಬಮ್ಮನವರು, ಜೋಪ್ಡಿ ಮಾದಯ್ಯ, ಪುಟ್ಟ ಮಾದಯ್ಯ, ಕ್ಯಾತಮಾರನಹಳ್ಳಿ ಮಹದೇವಯ್ಯ, ಕೃಷ್ಣಾಪುರದ ಸಿದ್ಧಶೆಟ್ಟಿ, ಕಂಪ್ಲಾಪುರದ ರಾಚಯ್ಯ, ಅಲಗೂಡು ಚನ್ನಯ್ಯ, ಜಿಲ್ಲ ಅಡ್ಡ ಹೆಸರಿನ ಸಿದ್ಧಯ್ಯ, ಸೋಬಾನೆ ತೋಪಮ್ಮ, ಮಂಟೇಲಿಂಗಯ್ಯ, ಕರಪಾಲ ತಿಮ್ಮಪ್ಪನವರು, ಬಜಗೂರು ಎಲ್ಲಯ್ಯ, ಮುಂತಾದ ಜನಪದ ವೃತ್ತಿಗಾಯಕರು ಹಾಡಿದ ಶರಣ ಕಾವ್ಯಗಳ ಗುಚ್ಛ ಈ ಕೃತಿ.

ಹನ್ನೆರಡನೆಯ ಶತಮಾನದ ಶರಣ ಚಳವಳಿಯಲ್ಲಿ ಸಿದ್ಧರಾಮನ ಪಾತ್ರ ಅಗಾಧ. ಕರ್ಮ, ಕಾಯಕ, ಶಿವಯೋಗದ ಮೂಲಕ ಶಿವತತ್ವವನ್ನು ಭಕ್ತಿಯೊಂದಿಗೆ ಸಮಾಜಮುಖಿಯಾಗಿ ತೋರಿದ ಚಾರಿತ್ರಿಕ ಪುರುಷ. ವಚನಗಳ ಮೂಲಕ ಸಮಾಜವನ್ನು ಎಚ್ಚರಿಸಿದ ಯೋಗಿ. ಇಂದಿನ ಮಹಾರಾಷ್ಟ್ರದ ಸೊಲ್ಲಾಪುರ, ಅಂದಿನ ಸೊನ್ನಲಿಗೆಯಲ್ಲಿ ದೇಗುಲ ಸಂಸ್ಕೃತಿಯನ್ನು ವೈಭವಯುತವಾಗಿ ಕಟ್ಟಿ ಬೆಳೆಸಿದ ಕೀರ್ತಿ ಸಿದ್ಧರಾಮನದು.ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಶಿವಭಕ್ತಿಯನ್ನು ತೋರುತ್ತಾ, ಮನುಷ್ಯರಾದಿಯಾಗಿ ಪ್ರಾಣಿ–ಪಕ್ಷಿಗಳಿಗೆಲ್ಲಾ ಉಪಯೋಗವಾಗಲು ಕೆರೆ, ಕಟ್ಟೆ, ಬಾವಿಗಳನ್ನು ನಿರ್ಮಿಸುತ್ತಾ, ಅರವಟ್ಟಿಗೆ ಛತ್ರಗಳ ಮೂಲಕ ಅನ್ನ ದಾಸೋಹವನ್ನು ಮಾಡುತ್ತಾ, ಜನಾನುರಾಗಿಯಾಗಿ ಬದುಕಿದ್ದು ಇತಿಹಾಸ. ಕನ್ನಡ ಸಾಹಿತ್ಯ ಪರಂಪರೆ ಸಿದ್ಧರಾಮನ ಈ ಧಾರ್ಮಿಕ ಮತ್ತು ಸಾಮಾಜಿಕ ಕಾಳಜಿಗಳನ್ನು ಮುಕ್ತಕಂಠದಿಂದ

[1].ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸ ಗಂಗೋತ್ರಿ ಮೈಸೂರು
[2] .ಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಸ್ಮರಿಸಿದೆ. ಅಲ್ಲದೆ ಬಸವಾದಿ ಶರಣರ ಸಂಪರ್ಕಕ್ಕೆ ಬಂದ ಮೇಲೆ ವಚನಗಳ ಮೂಲಕ ಜನರ ಉದ್ಧಾರಕ್ಕೆ ದುಡಿದದ್ದು ಮಹತ್ತರವಾದ ವಿಷಯ. ಸಂಸಾರದ ಬಂಧನಗಳಲ್ಲಿದೆ ಬದುಕಿನ ಕೊನೆಯವರೆಗೂ ವಿರಕ್ತನಾಗಿ, ಸಮಾಜಕ್ಕೆ ತನ್ನನ್ನು ಸಮರ್ಪಿಸಿಕೊಂಡು "ಯೋಗಿಗಳ ಯೋಗಿ ಸೊಡ್ಡಳ ಸಿದ್ಧರಾಮನೊಬ್ಬನೆ ಶಿವಯೋಗಿ" ಎಂದು ಶರಣರಿಂದಲೇ ಪ್ರಶಂಸೆಗೆ ಪಾತ್ರನಾಗಿದ್ದು ಸಿದ್ಧರಾಮನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. " ಶಿವಶರಣರ ಶರೀರಂ ವೃಥಾ ಸವೆಯಲಾಗದು ಅನುಗೊಂಬನಿತು ಕಾಯಕ ನಡೆಯುತಿರಬೇಕು" ಎಂಬುದು ಸಿದ್ಧರಾಮನ ಬದುಕಿನ ದಿವ್ಯಮಂತ್ರ. ಅದೇ ರೀತಿ ಬದುಕಿ ಜೀವಂತ ಸಮಾಧಿಗೊಂಡು, ಜನರ ಮನದಲ್ಲಿ ಪ್ರಸ್ತುತದಲ್ಲಿಯೂ ದೈವೀಸ್ವರೂಪದಲ್ಲಿ ಸಿದ್ಧರಾಮೇಶ್ವರ ಪೂಜಿಸಲ್ಪಡುತ್ತಿದ್ದಾನೆ. ಶಿವನೇ ಸಿದ್ಧರಾಮನೆಂದು ಕಾವ್ಯಗಳು, ಐತಿಹ್ಯಗಳು ಬಿಂಬಿಸಿವೆ. ಪ್ರಸ್ತುತ ಸಿದ್ಧರಾಮನ ೧೯೬೨ ವಚನಗಳು ನಮಗಿಂದು ದೊರಕಿವೆ.('ಸಿದ್ಧರಾಮೇಶ್ವರ ವಚನ ಸಂಪುಟ' – ಸಂ. ಎಸ್ ವಿದ್ಯಾಶಂಕರ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧)

ಸಿದ್ಧರಾಮನ ಜೀವನವನ್ನು ಕುರಿತು ಅಧ್ಯಯನ ಮಾಡುವಾಗ ಅನೇಕ ಗೊಂದಲಗಳು ಎದುರಾಗುತ್ತವೆ. ಉಳಿದ ಶರಣರದ್ದು ಸಹ ಇದೇ ಸಮಸ್ಯೆ. ಪುರಾಣ, ಕಾವ್ಯ, ಸಂಕಲನ ಗ್ರಂಥಗಳು ಶರಣರ ಅಧ್ಯಯನಕ್ಕೆ ಇರುವ ಪ್ರಮುಖ ಆಕರಗಳು. ಇಲ್ಲಿ ಶುದ್ಧ ಐತಿಹಾಸಿಕತೆಯನ್ನು ಹುಡುಕುವುದು ಕಷ್ಟಸಾಧ್ಯ. ಪವಾಡಗಳ ಜಾಲದಲ್ಲಿ ಚರಿತ್ರೆ ಪುರಾಣಕ್ಕೆ ತಿರುಗಿ ಸತ್ಯ ಮರೆಯಾಗುತ್ತದೆ. ಈ ಸಮಸ್ಯೆ ಸಾಹಿತ್ಯ ಕ್ಷೇತ್ರದ ತೊಡಕು. ಆದರೂ ಇಂತಹ ಚಾರಿತ್ರಿಕ ವ್ಯಕ್ತಿಗಳ ಚಿಂತನೆ ಉಳಿದಿರುವುದು ಈ ಸಾಹಿತ್ಯದಿಂದಲೇ ಎಂಬುದನ್ನು ಅಲ್ಲಗಳೆಯಲಾಗದು. ಸಿದ್ಧರಾಮನ ಕಲ್ಯಾಣ ಭೇಟಿ, ಲಿಂಗದೀಕ್ಷೆ ವಿಚಾರಗಳು ಇಂದಿಗೂ ಚರ್ಚೆಗೆ ಒಳಪಡುತ್ತಲೆ ಇವೆ. ಆದರೂ ಶಿವಯೋಗಿಯ ಭವ್ಯ ಬದುಕು ಕನ್ನಡ ಸಾಹಿತ್ಯಲೋಕದ ಮೂಲಕ ಬಿತ್ತರಗೊಂಡಿದೆ. ಜನಪದರಂತೂ ಸಿದ್ಧರಾಮನನ್ನು ಮುಕ್ತಕಂಠದಿಂದ ಸ್ಮರಿಸಿದ್ದಾರೆ. ಕಾವ್ಯಗಳ ಮೂಲಕ ಹಾಡಿ ಹೊಗಳಿದ್ದಾರೆ.

ಸಿದ್ಧರಾಮನ ಬಗ್ಗೆ ಮೊದಲು ಕಾವ್ಯ ರಚಿಸಿದವರು ಹರಿಹರ ಮತ್ತು ರಾಘವಾಂಕ. ಹರಿಹರನ ರಗಳೆಗಳಲ್ಲಿ ಸಿದ್ಧರಾಮನ ಪಾರ್ಶ್ವಿಕ ಚಿತ್ರಣವಿದೆ. ಸಿದ್ಧರಾಮನನ್ನೇ ಕೇಂದ್ರಿಕರಿಸಿ ಹರಿಹರ ರಗಳೆಯೊಂದನ್ನು ಬರೆದಿರಬಹುದು ಎಂದು ಡಾ. ಡಿ ಎಲ್ ನರಸಿಂಹಚಾರ್ ಅಭಿಪ್ರಾಯ ಪಟ್ಟಿದ್ದಾರೆ. ದುರಾದೃಷ್ಟವಶಾತ್ ಇಂದಿಗೂ ಆ ರಗಳೆ ದೊರಕಿಲ್ಲ. ರಾಘವಾಂಕ ರಚಿಸಿದ 'ಸಿದ್ಧರಾಮ ಚಾರಿತ್ರ' ಕಾವ್ಯವೇ ಶಿವಯೋಗಿಯ ಧಾರ್ಮಿಕ, ಸಾಮಾಜಿಕ ಸಾಧನೆಗಳ ಸಚ್ಚಾರಿತ್ರ್ಯವನ್ನು ಸಂಪೂರ್ಣವಾಗಿ ನಿರೂಪಿಸಿರುವ ಕೃತಿ. ಅನಂತರದಲ್ಲಿ ಅನೇಕ ವೀರಶೈವ ಕಾವ್ಯ ಪುರಾಣಗಳು, ಸಂಕಲನ ಗ್ರಂಥಗಳು, ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯ, ಕಾದಂಬರಿ, ನಾಟಕ, ಇನ್ನಿತರ ಸಾಹಿತ್ಯಗಳು ಸಿದ್ಧರಾಮನನ್ನು ಕುರಿತು

ರಚನೆಗೊಂಡಿವೆ. ಇವುಗಳಲ್ಲಿ ಸಿದ್ಧರಾಮನ ಜೀವನ ವೃತ್ತಾಂತ ವಿಭಿನ್ನವಾಗಿ ರೂಪುಗೊಂಡಿದೆ. ಜನಪದರು ಸಹ ತಮ್ಮ ಕಲ್ಪನಾ ಪ್ರಜ್ಞೆಯೊಂದಿಗೆ ಸಿದ್ಧರಾಮೇಶ್ವರನ ಕಾವ್ಯವನ್ನು ಶಿಷ್ಟಸಾಹಿತ್ಯದ ಸಹಾಯದೊಂದಿಗೆ ಭಿನ್ನವಾಗಿಯೇ ನಿರೂಪಿಸಿದ್ದಾರೆ.

ಬೆಟ್ಟದಬೀಡು ಸಿದ್ಧಶೆಟ್ಟರು ಸಿದ್ಧರಾಮೇಶ್ವರನನ್ನು ಕುರಿತ ಈ ಕಾವ್ಯವನ್ನು ಹಾಡಿದ್ದಾರೆ. ಪಿ.ಕೆ ರಾಜಶೇಖರ ಅವರು ಹೇಳುವಂತೆ " ಈ ಜನಪದ ಕಾವ್ಯವೂ ಪರೋಕ್ಷವಾಗಿಯೇ ಶಿಷ್ಟಕಾವ್ಯಗಳಿಗೆ ಸ್ವಲ್ಪಮಟ್ಟಿಗೆ ಋಣಿಯಾಗಿರುವಂತೆ ಕಂಡರೂ ಜಾನಪದ ಗಣಿಯಲ್ಲೇ ಸಿಕ್ಕಿದ ಅಪೂರ್ವ ವಜ್ರದಂತೆ ಕಂಗೊಳಿಸುತ್ತದೆ"(ಜನಪದ ಶರಣ ಕಾವ್ಯಗಳು ಪುಟ X) ಎಂಬ ಮಾತು ನಿಜಕ್ಕೂ ಸತ್ಯ. ಸಿದ್ಧಶೆಟ್ಟರ ಈ ಕಾವ್ಯ ೯ ಭಾಗಗಳಲ್ಲಿ ರೂಪುತಳೆದಿದೆ. ಕಾವ್ಯದ ಆರಂಭವೇ "ಶಿವಸಿದ್ಧನಾಗಿ ತಾನು ಭೂಲೋಕದಲ್ಲಿ ಹುಟ್ಟಬೇಕು" ಎಂದಿದೆ. ಪ್ರಾರಂಭದಲ್ಲಿ ಗಣೇಶ, ಪಾರ್ವತಿ–ಪರಮೇಶ್ವರನನ್ನು ಸಿದ್ಧಶೆಟ್ಟರು ನೆನೆದಿದ್ದಾರೆ. ಸಿದ್ಧರಾಮನನ್ನು ಭಕ್ತಿಪೂರ್ವಕವಾಗಿ ಸ್ಮರಿಸಿದ್ದಾರೆ.

**ಸಿದ್ಧ ಸಿದ್ಧರಿಗೆಲ್ಲಾ**
**ಗುರು ಸಿದ್ಧರಾಮಯ್ಯ**
**ಸತ್ಯ ಶರ್ಣ ಮಾತ್ಮರು**
**ನಿತ್ಯ ಸವೀಕ್ಯ ಕೊಡೊ**
**ಅವರ ಪಾದಂಗಳಿಗೆ**
**ಸರಣು ಸರಣಾರತಿ।**

**ಹೊತ್ತುನಂತೆ ನಾನು**
**ಭಕ್ತೀಲಿ ಶರಣು ಮಾಡಿ**
**ಶಿವು ಸೊರಣೆ ಮಾಡುತ**
**ಸುದ್ದುಳ್ಳ ಗುರುಸ್ವಾಮಿ**
**ಸಿದ್ಧರಾಮಯ್ಯನವರ**
**ಶಿವಕತೆಯ ಹೇಳುವೆ**
**ಕೇಳುವ ಮಾತ್ಮರಿಗೂ**
**ಕೋಟಿ – ಸರಣು ಸರಣಾರ್ತಿ। (ಜನಪದ ಶರಣ ಕಾವ್ಯಗಳು ಪುಟ ೨೧೯)**

ಸಿದ್ಧಶೆಟ್ಟರ ಈ ಜನಪದ ಕಾವ್ಯದ ಕಥೆ ರಾಘವಾಂಕನ 'ಸಿದ್ಧರಾಮ ಚಾರಿತ್ರ', ಇನ್ನಿತರ ಶಿಷ್ಟ ಕಾವ್ಯಗಳನ್ನು ಅನುಸರಿಸಿದ್ದರೂ ಕಥನಶೈಲಿಯಲ್ಲಿ ವಿಶಿಷ್ಟತೆಯನ್ನು ತೋರಿದೆ. ಜನಪದ ಕಾವ್ಯ 'ಸಿದ್ಧರಾಮೇಶ್ವರ'ದ ಪ್ರಾರಂಭವೇ ರಾಘವಾಂಕನ ರೀತಿಯಿಂದ ಭಿನ್ನವಾಗಿದೆ. ಸಿದ್ಧರಾಮನ ಜನ್ಮದಾತರಾದ ಮುದ್ದುಗೌಡ ಮತ್ತು ಸುಗ್ಗವ್ವೆ, ಮೊದಲು ಶಿವನ ಕೈಲಾಸದಲ್ಲಿ ಅದ್ರಿಶಿರ ಮತ್ತು ಊರ್ಧ್ವಶಿರ ಎಂಬ

ಗಂಧರ್ವ ದಂಪತಿಗಳಾಗಿದ್ದರು. ಭೃಂಗಿಯ ಶಾಪದಿಂದ ಭೂಲೋಕದಲ್ಲಿ ನರರ ರೂಪತಾಳಲು, ಅವರ ಶಾಪವಿಮೋಚನೆಗೆ, ಲೋಕೋದ್ಧಾರಕ್ಕೆ ಶಿವನ ಅಂಶವೇ ಸಿದ್ಧರಾಮನ ಅವತಾರದಲ್ಲಿ ಜನ್ಮವೆತ್ತಿರುವಂತೆ ರಾಘವಾಂಕ ಚಿತ್ರಿಸಿದ್ದಾನೆ. ಸಿದ್ಧಶೆಟ್ಟರು ಈ ಚಿತ್ರಣವನ್ನೇ ಬದಲಾಯಿಸಿದ್ದಾರೆ. ಜನಪದರ ಗ್ರಹಿಕೆಗಳು ಭಿನ್ನವಾಗಿ ಹೊಸತನದ ಸೃಷ್ಟಿ ಇಲ್ಲಿದೆ. ಸಿದ್ಧಶೆಟ್ಟರ ಕಥನ ತಂತ್ರ, ಚುರುಕು ಸಂಭಾಷಣೆ ಈ ಕಾವ್ಯದುದ್ದಕ್ಕೂ ವಿಜೃಂಭಿಸಿದೆ.

ಕರ್ಮಯೋಗಿಯಾದ ಸಿದ್ಧರಾಮನ ಅವತಾರಕ್ಕೆ ಹಿನ್ನೆಲೆಯಾಗಿ, ಕೈಲಾಸದ ನಂದೀಶ್ವರ ಮತ್ತು ಕಾಮಜೇನು(ಕಾಮಧೇನು) ದಂಪತಿಗಳ ಪರಸ್ಪರ ಭಿನ್ನಾಭಿಪ್ರಾಯವೇ ಕಾರಣ. ಶಿವನ ಸೇವೆಗೆ ತಡವಾಯಿತೆಂದು ಹೊರಡುವ ನಂದೀಶ್ವರನನ್ನು ಅವನ ಹೆಂಡತಿ ಕಾಮಜೇನು ಪ್ರಶ್ನಿಸುವ ರೀತಿ ಪ್ರತಿಭಟನೆ ಸ್ವರೂಪದಲ್ಲಿದೆ. ನಂದೀಶ್ವರನು "ಗೌರಿಶಂಕರರನು ನನ್ನ–ಬೆನ್ನಲ್ಲಿ ಏರ್ಸಿಕೊಂಡು ಜಗತ್ತದ ಜೀವಿಗಳಿಗೆ ಅನ್ನಪಡಿ ಅಳಿಯೋದ್ಕೆ ಅವ್ರ ಕರುಕೊಂಡೋಗಬೇಕು"(ಜನಪದ ಶರಣ ಕಾವ್ಯಗಳು ಪುಟ ೨೨೦).ಎಂಬುದಾಗಿ ಹಾತುರವಾಗಿ ಹೊರಡಲು ಸಿದ್ಧನಾದಾಗ ಅವನ ಪತ್ನಿ ಕಾಮಜೇನು ಕುಪಿತಳಾಗಿ, ತಂದೆ– ತಾಯಿಗೆ ಯಾರಾದ್ರೂ ಮಕ್ಕಳು ಹೆದ್ರುತಾರ, ಅವರ ತಂದೆ ತಾಯಿಗೆ ನಿಮ್ಮಂಗೆ ಅವರೂ ಹೆದರುತಿದ್ರಾ ಎಂದುಬಿಡುತ್ತಾಳೆ. ಮುಂದುವರೆದು,

> **"ಅದಿರ್ಲಿ ಹೊತ್ಕೊಂಡು ತಿರ್ಗಕೂ ಇಷ್ಟೊಂದು ಆತುರ್ವಾ?"**
> **"ಅದು ನನ್ನ ಕರ್ತವ್ಯ ಕಣೆ!"**
> **"ಕರ್ತವ್ಯ ಅಲ್ಲ ಕಣ್ರೀ ಅದು ಜೀತ!"(ಜನಪದ ಶರಣ ಕಾವ್ಯಗಳು ಪುಟ ೨೨೦)**

ಈ ರೀತಿಯ ಮಾತುಗಳು ಸಹಜವಾಗಿ ಬೆರಗು ಮೂಡಿಸುತ್ತದೆ. ಶೋಷಣೆಗೆ ಒಳಗಾದ ಸ್ವಾಭಿಮಾನಿ ಜನರ ನುಡಿಗಳಿವು. ಶಿವ–ಪಾರ್ವತಿಯಂಥ ಜಗದ ತಂದೆ ತಾಯಿಯನ್ನೇ ಪ್ರಶ್ನಿಸುವ ನೆಲೆ ಸುಲಭದ ಮಾತಲ್ಲ. ನಂದೀಶ್ವರನು ಕಾಮಜೇನುವನ್ನು ಕುರಿತು, ಇಡೀ ಜಗತ್ತಿಗೆ ಶಿವಪಾರ್ವತಿಯೇ ತಂದೆ ತಾಯ್ಗಳು "ಅವುರ್‌ಗ್ಯಾವ್ ತಂದೆ ತಾಯಿಗಳೆ?" ಎಂದು ಪ್ರಶ್ನೆ ಮಾಡುತ್ತಾನೆ. ಮರು ಉತ್ತರವಾಗಿ "ಅದೇ ಕಣ್ರಿ ನಾನ್ ಹೇಳ್ತಾ ಇರೋದು, ತಂದೆ ತಾಯಿ ಕಂಡಿದೋರ್ಗೆ ತಂದೆ ತಾಯ್ಗಳ ಸುಖ ಅಂದ್ರೇನು ಅನ್ನೋದು ಅರ್ಥವಾಗ್ತದೆ, ಅಂದ್ಮೇಲೆ ಪರಮೇಶ್ವುರಂಗೆ ಹೆಂಗ್ ಅರ್ಥವಾಯ್ತದೆ ಹೇಳಿ?" ಎಂಬುದಾಗಿ ಕಾಮಧೇನು ನುಡಿಯುವ ಮಾರ್ಮಿಕ ಮಾತು, ಮಹಾದೇವಿ ಅಕ್ಕನ "ಬಂಜೆ ಬೇನೆ ಅರಿವಳೆ, ಮಲತಾಯಿ ಮುದ್ದು ಬಲ್ಲಳೆ, ನೊಂದವರ ನೋವ ನೋಯದವರೆತ್ತ ಬಲ್ಲರು" ಎಂಬ ವಚನವನ್ನು ನೆನಪಿಸುತ್ತದೆ. ಹೀಗೆ ಪರಸ್ಪರ ಚರ್ಚೆಗಳಾಗಿ ದೊಡ್ಡವರ ಕುರಿತು ಮತನಾಡುವುದು ಸರಿಯಲ್ಲ ಎಂದು ನಂದೀಶ್ವರನು ಕಾಮಜೇನು ಜೊತೆಗೂಡಿ "ಆಡಿದ ಪಾಪುವನ್ನು ಕಳ್ಕೊಳನ ನಡಿ" ಎಂದು ಶಿವ–

ಪಾರ್ವತಿಯ ಬಳಿ ಬರುತ್ತಾರೆ. ಕಾಲಿಗೆ ಬಿದ್ದು, ಕರವೆತ್ತಿ ಮುಗಿಯುತ್ತಿದ್ದಾಗ, ಮೊದಲೇ ಶಿವನಿಗೆ ನಂದೀಶ್ವರ– ಕಾಮಜೇನು ದಂಪತಿಗಳ ಪರಸ್ಪರ ಚರ್ಚೆಗಳೆಲ್ಲ ದಿವ್ಯಜ್ಞಾನದಿಂದ ತಿಳಿದಿರುತ್ತದೆ. ಆಗ ಹೇಳುವ ಶಿವನ ಮಾತುಗಳು ಸಿದ್ಧರಾಮನ ಜನನದ ಹಿನ್ನೆಲೆಯನ್ನು ತೋರುತ್ತದೆ. “ಕಂದ ನಂದೀಶ್ವರ,ಮಗಳೆ ಕಾಮಜೇನು ನಿಮ್ಮಿಬ್ಬರ ಮನ್ಸುಗಳ ಯೋಚಿಣೆಯ ಮಾಡಿದಂತ ಬುದ್ದಿ ಚಾತುರ್ಯವೆಲ್ಲ ನನ್ನ ಮನಸೀಗೆ ತಿಳಿದಿದೆ. ತಂದೆ ತಾಯ್ಗಳ ಸುಖ ಏನೂನ್ನೋದ ನಾನು ಅನುಭವ್ಸಿ ಬರಬೇಕು, ತಿಳುಕೊಂಡು ಬರಬೇಕು. ಅದಕಾಗಿ ನಾನೀಗ ಭೂಮೀಗೆ ಹೋಗಬೇಕು, ಶಿವಸಿದ್ಧನಾಗಿ ನಾನು ಭೂಲೋಕ್ದಲ್ಲಿ ಹುಟ್ಟಬೇಕು, ಭೂಲೋಕ್ದಲ್ಲಿ ಬಾಳಬೇಕು”(ಜನಪದ ಶರಣ ಕಾವ್ಯಗಳು ಪುಟ ೨೨೧) ಎಂಬುದಾಗಿ ಸಿದ್ಧರಾಮನ ಜನನದ ಹಿನ್ನೆಲೆಯಿದೆ. ಶಿವನು ನಂದೀಶ್ವರನಿಗೆ ಕಂದಾ ನೀನು ನನ್ನ ತೂಕವ ತಿಳಿದಿದ್ದಯಾ, ಈಗ ನಾನು ಭೂಲೋಕಕ್ಕೆ ಹೋಗಿ ಜನರ ಕಷ್ಟ, ಕೋಟಲೆ, ದುಕ್ಕದ ಭಾರವನ್ನು ನಾನು ಕಂಡು ಬರುತ್ತೇನೆ. ಭೂಲೋಕದಲ್ಲಿ ನೀವು ಒಕ್ಕಲಿಗ್ರ ಮುದ್ದೇಗೌಡ ಮತ್ತು ಸುಗ್ಗಮ್ಮರಾಗಿ ನೀವಿಬ್ಬರು ದಂಪತಿಗಳು ಜನಿಸಿ, ಸಿದ್ಧನಾಗಿ ನಾನು ನಿಮ್ಮ ಹೊಟ್ಟೆಯಲ್ಲಿ ಹುಟ್ಟುತ್ತೇನೆ ಎನ್ನುತ್ತಾನೆ. ಈ ಸೃಷ್ಟಿ ಸಿದ್ಧಶೆಟ್ಟರ ಸ್ವಂತಿಕೆಯನ್ನು ತೋರ್ಪಡಿಸುತ್ತದೆ. ರಾಘವಾಂಕ ರೂಪಿಸಿದ ಚಿತ್ರಣವೇ ಇಲ್ಲಿ ಬದಲಾಗಿದೆ.

ಹೀಗೆ ಭೂಲೋಕದ ಶಿವಮಾಳಿಗೆ ಪುರದಲ್ಲಿ ಹುಟ್ಟಿದ ಕಾಮಧೇನು–ನಂದೀಶ್ವರ ದಂಪತಿಗಳು, ರಾಘವಾಂಕ ಚಿತ್ರಿಸಿದ ಗಂಧರ್ವರಂತೆ ಶಾಪಗ್ರಸ್ಥರಲ್ಲ. ಸಿದ್ಧರಾಮನ ಜನನದ ಉದ್ದೇಶದಿಂದಲೇ ಭೂಮಿಯಲ್ಲಿ ಅವತರಿಸಿದವರು. ಮುದ್ದುಗೌಡ ಮತ್ತು ಸುಗ್ಗವ್ವೆ ದಂಪತಿಗಳಿಗೆ ಬಹುಕಾಲದವರೆಗೆ ಮಕ್ಕಳಿರಲಿಲ್ಲ. ಆ ಕೊರಗಿನ ನಡಿವೆ ಬದುಕುತ್ತ ವೃದ್ಧಾಪ್ಯದ ಅಂಚಿಗೆ ಬರುತ್ತಿದ್ದಾಗ, ಒಂದು ದಿನ ರೇವಣಸಿದ್ಧರು ಮುದ್ದೇಗೌಡ್ರ ಮನೆಗೆ ಬಂದು ಬಿಕ್ಷಾವ ಸಾರಿ, ಸುಗ್ಗವ್ವೆ ಬಂಜೆ ತನವನ್ನು ಕಂಡು ಮರುಗಿ, “ಸಿದ್ಧಪುರುಷನೊಬ್ಬ ನಿನ್ಹೊಟ್ಟೇಲಿ ಹುಟ್ತಾನಮ್ಮ” ಎಂದು ಕಾಲಜ್ಞಾನವನ್ನು ನುಡಿದು, ಆತ ಹುಟ್ಟಿದಾಗ ಮತ್ತೆ ಬರುವೆ ಎಂದು ಹೇಳಿ ಹೊರಟುಹೋಗುತ್ತಾರೆ. ಮುಂದೆ ಶಿವಪಾರ್ವತಿ ಕೈಲಾಸದಲ್ಲಿ, ಈ ದಂಪತಿಗಳ ಕುರಿತು ಚರ್ಚೆ ಮಾಡುತ್ತಿದ್ದಾಗ ಇಬ್ಬರಲ್ಲಿ ಒಬ್ಬರು ಸುಗ್ಗವ್ವೆಯ ಉದರದಲ್ಲಿ ಜನಿಸುವಂತೆ ತೀರ್ಮಾನವಾಗುತ್ತದೆ, ಶಿವನು ಜಂಗಮ ರೂಪದಲ್ಲಿ ಸುಗ್ಗವ್ವೆಯ ಮನೆಗೆ ಭಿಕ್ಷೆಗೆ ಹೋಗುತ್ತಾನೆ. ಎರಡು ಮಾವಿನ ಹಣ್ಣುಗಳನ್ನು ನೀಡಿ, ಯಾವುದಾದರೂ ಒಂದನ್ನು ಸ್ವೀಕರಿಸುವಂತೆ ಹೇಳಿ, ಸುಗ್ಗವ್ವೆಗೆ ಸಂತಾನವಾಗುವುದೆಂದು ತಿಳಿಸುತ್ತಾನೆ. ಈ ಎರಡು ಮಾವಿನಹಣ್ಣುಗಳಲ್ಲಿ ಒಂದು ಪಾರ್ವತಿ, ಮತ್ತೊಂದು ಶಿವನ ಅಂಶದಿಂದ ಕೂಡಿರುತ್ತದೆ. ಸುಗ್ಗವ್ವೆ ಶಿವನ ಅಂಶವಿರುವ ಮಾವಿನ ಹಣ್ಣನ್ನು ಸ್ವೀಕರಿಸಿ ತಿಂದು,

ಸಿಪ್ಪೆಯನ್ನು ತಮ್ಮ ಕಪಿಲೆ ಎಂಬ ಹಸುವಿಗೆ ಹಾಕುತ್ತಾಳೆ. ಇಬ್ಬರೂ ಗರ್ಭಧರಿಸುತ್ತಾರೆ. ಮುದ್ದೇಗೌಡ ಬಹಳ ಸಂತೋಷದಿಂದ ಜನರಿಗೆ ದಾನಗಳನ್ನು ನೀಡುತ್ತಾನೆ.

"ತುಂಬುದ ಸ್ವಾಮಾರ ಸುಬುವಾದ ಗಳಿಗೇಲಿ" ಸಿದ್ಧರಾಮನ ಜನನವಾಗುತ್ತದೆ. ಸ್ವತ: ಪಾರ್ವತಿಯೇ ಬಂದು ಹೆರಿಗೆ ಮಾಡಿಸುತ್ತಾಳೆ. ಸಿದ್ಧರಾಮ ಹುಟ್ಟಿದ ದಿನ ಶಿವಮಾಳಿಗೆಪುರದಲ್ಲಿ ಸುವರ್ಣದ ಮಳೆ ಸುರಿದು ಅದು ಸೊನ್ನಲಿಗೆಯಾಯ್ತು ಎಂದು ಸಿದ್ಧಶೆಟ್ಟರು ಮನದುಂಬಿ ಹಾಡಿದ್ದಾರೆ. ಸಿದ್ಧರಾಮ ಹುಟ್ಟಿದ ನಂತರ ಸೊನ್ನಲಿಗೆಯನ್ನು ಆಳುತ್ತಿದ್ದ ರಾಣಿ ಚಾಮಲಾದೇವಿಯ ಬೊಕ್ಕಸ ತುಂಬಿ ತುಳುಕುತ್ತದೆ. ಶಿವನೇ ಸಿದ್ಧರಾಮನಾಗಿ ಹುಟ್ಟಿದಾಗ ಪಾರ್ವತಿಯು ಹೆರಿಗೆಯನ್ನು ಮಾಡಿಸುವುದಲ್ಲದೆ, ಸುಗ್ಗವ್ವೆಗೆ ಎದೆಹಾಲು ಇಲ್ಲದಿದ್ದಾಗ, ತಾನೇ ಶಿವನಿಗೆ ಎದೆಹಾಲು ಕುಡಿಸುತ್ತಾಳೆ. ಆಗ ಶಿವನಾಡುವ ಮಾತು ಹೆಣ್ಣಿನ ಮಾತೃತ್ವದ ಮಹತ್ತನ ಜೊತೆಗೆ ಸಿದ್ಧರಾಮನು ವಿರಕ್ತನಾಗಿ, ಯೋಗಿಯಾಗಿ ಬದುಕುವ ಮುನ್ಸೂಚನೆಯನ್ನು ತಿಳಿಸುತ್ತದೆ.

**"ಕೈಲಾಸದಲ್ಲಿ ಮಡ್ಡಿ ನೀನು**
**ಭೂಲೋಕದಲ್ಲಿ ತಾಯಾದೆ**
**ನನ್ಗೆ ಹಾಲು ಕುಡಿಸೀದೆ**
**ಈ ಒಂದು ಕಾರ್ಣದಿಂದ**
**ಈ ಭೂಮಿಲಿರೊ ಹೆಣ್ಗೆಳೆಲ್ಲ**
**ನನ್ಗೆ ತಾಯಿ ಸಮಾನ" (ಜನಪದ ಶರಣ ಕಾವ್ಯಗಳು ಪುಟ ೨೨೭)**

ಸಿದ್ಧರಾಮನ ಜನನದ ನಂತರ ರೇವಣಸಿದ್ಧನು ಸೊನ್ನಲಿಗೆಗೆ ಬಂದು, ಮುದ್ದುಗೌಡ ಮತ್ತು ಸುಗ್ಗವ್ವೆಯ ಮನೆಗೆ ತೆರಳಿ "ನಿಮ್ಮ ಮನೆಯಲ್ಲಿ ಮಹಾತ್ಮನೊಬ್ಬ ಜರಣವಾಗಿದ್ದಾನೆ, ಅವನ ದರ್ಶನ ಮಾಡಿ ಪಾದಗಳಿ ಮುಟ್ಟಿ ನಮಸ್ಕಾರ ಮಾಡಕೆ ಅಂತ ಬಂದಿವ್ನಿ" ಎಂದು ಹೇಳಿ, ಮಗುವನ್ನು ನೋಡಿ ಕಂದನ ಕಾಲುಗಳನ್ನು ಹಣೆಗೊತ್ತಿಕೊಳ್ಳುತ್ತಾರೆ. ಇವನಿಗೆ ಸಿದ್ಧ, ರಾಮೇಶ್ವರ ಅಂತ ಕರೆಯಿರಿ, "ನಿಮ್ಮ ಕಪಿಲೆ ಈವತ್ತು ಒಂದು ಹೋರ್ಗರ ಹಾಕ್ತದೆ ಅದ್ನ ರಾಮಾಂತ ಕರಿಯಪ್ಪ" ಮುದ್ದಗೌಡ ಅಂತೇಳಿ ಅಲ್ಲಿಂದ ತೆರಳುತ್ತಾರೆ. ಹೀಗೆ ಮುಂದುವರೆಯುವ ಕಥಾಸಾರ ರಾಘವಾಂಕ ಕೃತಿಯನ್ನು ಅನುಸರಿಸಿದೆ. ಸಿದ್ಧರಾಮನ ಬಾಲ್ಯ, ಮುಗ್ಧನಂತೆ ದಡ್ಡನಂತೆ ದನಕಾಯವ ಪ್ರಸಂಗ, ಮಲ್ಲಯ್ಯನ ದರ್ಶನ, ಪರಿಷೆಯೊಂದಿಗೆ ಶ್ರೀಶೈಲ ಯಾತ್ರೆ, ಕಮರಿಕೊಳ್ಳದ ಚಿತ್ರಣಗಳು ರಾಘವಾಂಕನ ಸಿದ್ಧರಾಮ ಚಾರಿತ್ರದ ರೂಪದಲ್ಲಿದೆ. ಆದರೆ ಕಥಾಶೈಲಿ, ತಂತ್ರ ದೇಸಿಯತೆಯನ್ನು ಅನುಸರಿಸಿದೆ. ಸಿದ್ಧಶೆಟ್ಟರ ನಿರೂಪಣಾ ಶೈಲಿ ಸಿದ್ಧರಾಮೇಶ್ವರನ ಪಾತ್ರದ ಶಕ್ತಿಯನ್ನು ಅನಾವರಣಗೊಳಿಸಿದೆ. ಮಲ್ಲಯ್ಯನನ್ನು ಕಾಣದೆ ಸಿದ್ಧರಾಮ ಅನುಭವಿಸುವ ಯಾತನೆಗಳನ್ನು ಸಿದ್ಧಶೆಟ್ಟರು ಭಾವುಕವಾಗಿ ಚಿತ್ರಿಸಿದ್ದಾರೆ. ಕಾಲು, ಮಂಡಿ, ತೋಳು,

ಮೊಣಕಾಲುಗಳೆಲ್ಲಾ ಮುರುದಂತಾಗಿ ಬಿದ್ದಿದ್ದರೂ ನಿಜದ ಮಲ್ಲಯ್ಯನನ್ನು ಕಾಣಲೇಬೇಕೆಂದು ಸಿದ್ಧರಾಮ ಹಂಬಲಿಸುವುದು, ಮೈದಾಳ ರಾಮಯ್ಯನ ಕಥೆಯ ಚಿತ್ರಣವನ್ನು ನೆನಪಿಸುತ್ತದೆ.

**"ರಾಮಯ್ನ ಸಂಗುಟಾವ**
**ಆನೆ ಹುಲಿ ಕರಡಿಗಳು**
**ಸಿಮ್ಮ ಸಾರ್ದೂಲಗಳು**
**ಕಡವೆ ಕಾಟಿಮ್ಮೆಗಳು**
**ನವುಲು ಸಾರಂಗಗಳು**
**ಜಿಂಕೆಗಳು ಮೊಲಗಳು**
**ಮಂಗ ಮೊರಕಾಟಿಗಳು**
**ಎಲ್ಲವೂ ನೋಡುತ**
**ಕಣ್ಣೀರ ಸುರ್ಸಿದವು**
**ರಾಮಯ್ಯನ ಭಕ್ತೀಗೆ**
**ಎಲ್ಲ ಜೀವಿಗಳು**
**ಸಂತೋಸ ಪಡುತ**
**ಸರಣಾರ್ತಿ ಮಡಿದವು (ಜನಪದ ಶರಣ ಕಾವ್ಯಗಳು ಪುಟ ೨೩೮)**

ಮಲ್ಲಯ್ಯನನ್ನು ಕಾಣದೆ ರುದ್ರಗಮ್ಮರಿಯಲ್ಲಿ ಬೀಳುವಾಗ ಸಾಕ್ಷಾತ್ ಪಾರ್ವತಿ–ಪರಶಿವನು ಬಂದು ತೋಳಲ್ಲಿ ರಾಮಯ್ನ ಆತುಕೊಂಡು ಕೈಲಾಸಕ್ಕೆ ಹೋದರು. "ಗಣಪತಿ ಸಣ್ಮುಕ ರಾಮಯ್ನ ನೋಡಿದರು, ಆಟ ಆಡಕೆ ನಮ್ಗೆ ಒಳ್ಳೆ ಸಿನೇಹ್ತ ಅಂದ್ರು, ಸಕಲ ಗಣಗಳು ರಾಮಯ್ನ ನೋಡಿದರು", ... "ಪಾರ್ವತಿ ದಾಸೀರ ಕೈಲಿ ಕಾಸೀದಾಲ ತರಿಸಿ ಒಳ್ಳೇಲಿ ಹಾಲುಕಡಿಸಿ ಕಂದುಂಗೆ ನೀವಳಿಸಿ ದ್ರಿಷ್ಟಿ ತಗುದಾಳು" ಎಂಬುದಾಗಿ ಸಿದ್ಧಶೆಟ್ಟರು ಹಾಡಿದ್ದಾರೆ. ಕೈಲಾಸದಲ್ಲಿ ಸಿದ್ಧರಾಮನು ಮಗುವಿನಂತೆ ಕುಣಿದಾಡುತ್ತಾ ಸಂತೋಷದಿಂದ ಇರುವಾಗ ಶಿವನು "ಮುದ್ದುಕಂದ ಸಿದ್ದು ನೀನು ಬಂದು ವಾರವು ಕಳುದೋಯ್ತು ನೀನು ಸೊವರುಣಪುರಕ್ಕೆ ಹೋಗಾದಿಲ್ವ ಕಂದ?" ಎನ್ನುತ್ತಾನೆ. ಸಿದ್ಧರಾಮನು ಶಿವ ಪಾರ್ವತಿಯನ್ನು ಅಗಲಲಾರದೇ ಅನುಭವಿಸುವ ಯಾತನೆ ಸಿದ್ಧಶೆಟ್ಟರ ನುಡಿಗಳಲ್ಲಿ ಭಾವತುಂಬಿ ನಿಂತಿದೆ.

ಶಿವನು ಸಿದ್ಧರಾಮನಿಗೆ "ನೀನು ಕಾಯ ಸೈತ ಇಲ್ಲಿ ಇರಾದಕಾಗದಿಲ್ಲ, ಭೂಲೋಕುದಲ್ಲಿ ನೀನು ನಿನ್ನ ಕಾಯಕಗಳ ಮುಗ್ಸಿ ಆಮ್ಯಾಲೆ ಕೈಲಾಸ್ಕೆ ಬರಬೇಕು ರಾಮಯ್ಯ" ಎನ್ನುತ್ತಾನೆ. ಸಿದ್ಧರಾಮನು ಹೋಗಲಾರದೆ ಗೋಳಿಡುತ್ತಿರುವಾಗ ಶಿವನು ಲಿಂಗದ ರೂಪದಲ್ಲಿ ನಿನ್ನೂರಿನಲ್ಲಿ ನೆಲೆಗೊಳ್ಳುತ್ತೇನೆ, ಚಾಮಲಾದೇವಿ ನಿನಗೆ ಧನಸಹಾಯ ಮಾಡುತ್ತಾಳೆ ಅದರಿಂದ ನೀನು "ಕೆರೆ ಕಟ್ಟೆ ಕಟ್ಟಿಸು, ಗುಡಿಗುಂಡಾರ ಕಟ್ಸು,ಬಡವರಿಗೆಲ್ಲ ಮನೆಮಠ ಕಟ್ಟಿಸು, ನೀರುನಿಡಿ ಸಿಗುವಂತೆ ಕೆರೆಕಟ್ಟೆ ಕಟ್ಟಿಸಿ ಉಪಕಾರಿ ಆಗಪ್ಪ" ಎಂದು ಹೇಳಿ ರಾಮಯ್ಯನನ್ನು ಭೂಮಿಗೆ ಕಳುಹಿಸುತ್ತಾರೆ. ಹೀಗೆ ಭೂಮಿಗೆ ಬಂದ ಸಿದ್ಧರಾಮನು ಕಪಿಲೆ ಎಂಬ

ಹಸುವನ್ನು ಪೂಜೆ ಮಾಡಿ, ಮಲ್ಲಿಕಾರ್ಜುನ ಲಿಂಗವನ್ನು ತೋರುವಂತೆ ಕೋರುತ್ತಾನೆ. "ಹೊನ್ನರಳಿ ಮರುದತ್ರ ಇರೋ ಹೊನ್ನುತ್ತದ ಹತ್ತಿರಕೆ ಬಂದಿತು ಹೊನ್ನುತ್ತದ ಕಪಿಲೆ ಕಾಲುಗಳ ಪೊತ್ತುರಿಸಿ ಹಾಲನ್ನು ಜೊರ್ರಂತ ಕರೆಯುತ ಇರುವಾಗ ಹುತ್ತದ ಒಳಗಿಂದ ಮಲ್ಲಿಕಾರ್ಜುನ ಸ್ವಾಮಿ ಪ್ರತ್ಯಕ್ಷ ಆದರು" ಆಗ ಸಿದ್ಧರಾಮನು ಸಂತೋಷದಿಂದ ಕುಣಿದಾಡುತ್ತಾನೆ. ಸೊನ್ನಲಿಗೆಯ ರಾಣಿ ಚಾಮಲಾದೇವಿಗೆ ಶಿವನು ಕನಸಿನಲ್ಲಿ ಬಂದು ಸಿದ್ಧರಾಮನ ಕಾರ್ಯಕ್ಕೆ ನೆರವಾಗು ಎಂದು ತಿಳಿಸಿರುತ್ತಾನೆ. ಅದರಂತೆ ಸಿದ್ಧರಾಮನನ್ನು ಕಂಡ ಚಾಮಲಾದೇವಿ ರಾಮಯ್ನ ಪಾದಗಳಿಗೆ ಶರಣು ಮಾಡಿ ಎಲ್ಲಾ ರೀತಿಯ ನೆರವು ನೀಡುತ್ತಾಳೆ. ಆಗ ಸಿದ್ಧೇಶನು "ಮಲ್ಲಯ್ಯ ಸ್ವಾಮೀಗೆ ದೇಮಲ್ಯ ಕಟ್ಟಿಸಿದ, ಪಸುಪಕ್ಷಿ ಪ್ರಾಣಿಗಳ ನೀರು ಕುಡಿಯಲಂತ ಕೆರೆಗಳ ಕಟ್ಟಿಸಿದ, ಬಡಬಗ್ಗರ ಮಕ್ಕಳಿಗೆ ಮದುವೆಗಳ ಮಾಡಿಸಿದ, ಮನೆ ಇಲ್ಲದೋರಿಗೆ ಮನೆಗಳ ಕಟ್ಟಿಸಿದ, ಹೊಲಗದ್ದೆ ಇಲ್ಲದೋರ್ಗೆ ಹೊಲಗದ್ದೆಗಳ ಕೊಡಿಸಿದ, ಕೆಲಸ ಇಲ್ಲದೋರ್ಗೆ ಚಾಮವ್ವೆ ರಾಣಿಗೇಳಿ ಅವುರ್ಗೆ ಕೆಲ್ಸಗಳ ಕೊಡಿಸಿದ, ಅನ್ನಚತ್ರಗಳ ಕಟ್ಸಿ ಅನ್ನದಾನ ಮಾಡಿಸಿದ ಮಲ್ಲಯ್ಯನ ಹೆಸ್ರಲ್ಲಿ ಎಲ್ಲೆಲ್ಲು ಗುಡಿಗಳು ಗೋಪ್ರುಗಳ ಎತ್ತುಸ್ದ, ಲೋಕ ಲೋಕಕೆಲ್ಲ ರಾಮಯ್ಯ ಹೆಸರಾದ" (ಜನಪದ ಶರಣ ಕಾವ್ಯಗಳು ಪುಟ ೨೪೨) ಎಂದು ಸಿದ್ದಶೆಟ್ಟರು ಹಾಡಿದ್ದಾರೆ. ಈ ಸಂದರ್ಭ ಸಿದ್ಧರಾಮನ ಲೋಕಾನುಕಂಪೆ ಮತ್ತು ಜನಾನುರಾಗಿ ನಾಯಕತ್ವದ ಗುಣವನ್ನು ತೋರುತ್ತದೆ.

ಸಿದ್ಧರಾಮನು ಗುರುಮಠವನ್ನು ಕಟ್ಟಿ ಅಲ್ಲಿ ಇರುವಾಗ ಅಲ್ಲಮ ಪ್ರಭು ಬರುತ್ತಾರೆ. ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿ ಈ ಚಿತ್ರಣ ವಿಶಿಷ್ಟವಾಗಿ ರೂಪುತಳೆದಿದೆ. ಪ್ರಭುಲಿಂಗಲೀಲೆ, ಶೂನ್ಯಸಂಪಾದನೆಗಳಂತ ಕೃತಿಯಲ್ಲಿ ಅಲ್ಲಮ–ಸಿದ್ಧರಾಮರ ಧಾರ್ಮಿಕ ವೈಚಾರಿಕ ಸಂವಾದವಿದೆ. ರಾಘವಾಂಕನ ಕೃತಿಯಲ್ಲಿ ಸಿದ್ದರಾಮನ ಕಲ್ಯಾಣದ ಭೇಟಿಯ ಪ್ರಸಂಗವಿಲ್ಲ. ಸಿದ್ಧಶೆಟ್ಟರ ಈ ಕಾವ್ಯದಲ್ಲಿ ಸಿದ್ದರಾಮನು ಅಲ್ಲಮನೊಡನೆ ಕಲ್ಯಾಣಕ್ಕೆ ತೆರಳಿ " ಬಸವಣ್ಣನವುರತ್ರ ಲಕ್ಕುಸ್ದಮ್ಯಾಲೆ ತೊಂಬತ್ತಾರು ಕೋಟಿ ಗಣಂಗಳು ಇರುವುದ ಕಂಡರು, ಅವುರೆಲ್ಲರಿಗೂ ಶರ್ಣು ಮಾಡಿ ಅಲ್ಲಿಂದ ರಾಮಯ್ಯ ಸೊನ್ನಲಾಪುರಕ್ಕೆ ಬಂದು ಸ್ವಾಮೀಯ ನೆನೆದಾರು" ಎಂಬ ಚಿತ್ರಣವಿದೆ. ಮುಂದೆ ಬಸವಣ್ಣನವರು ಕಾಯವ ಕಳುದು ಕೈಲಾಸ ಸೇರಿದ ಸುದ್ದಿಯನ್ನು ಸಿದ್ಧರಾಮನಿಗೆ ಅಲ್ಲಮನು ತಿಳಿಸಲು, ಕೂಡಲೇ ಕೈಲಾಸಕ್ಕೆ ಹೋದ ಸಿದ್ದೇಶನು ಮಲ್ಲಯ್ಯನ ಕಾಲಿಗೆ ಬಿದ್ದು "ಸ್ವಾಮಿ ನನ್ನಯ್ಯ ನಿನ್ನ ಬಿಟ್ಟು ನಾನು ಆ ಭೂಮೀಲಿ ಇರಲಾರೆ ನಾನು ಬಂದುಬುಡುತೀನಿ" ಎನ್ನುತ್ತಾನೆ. ಮಲ್ಲಯ್ಯನು ಕಾಯವ ಕಳ್ದು ನೀನು ಬಾ ಹೋಗು ಕಂದಯ್ಯ ಎನ್ನುತ್ತಾ ಸಮಾಧಾನ ಮಾಡಿ ಭೂಮಿಗೆ ಕಳುಹಿಸಲು, ಸಿದ್ಧರಾಮನು ಸೊನ್ನಲಾಪುರಕ್ಕೆ ಬಂದು ಸಿಸುಮಕ್ಕಳೆಲ್ಲರನ್ನೂ ಕರೆದು, ಕೈಲಾಸಕ್ಕೆ ಹೋಯ್ತಿನಿ ಅಂತೇಳಿ "ಕಾವಿಕಮಂಡಲ ಸೈತ ಯೋಗದಂಡ ಹಿಡ್ದು ಬಯಲಾದ ಬಯಲಲ್ಲಿ ತ್ರಪಸೀಗೆ ಕುಣುತಾರು, ಕುಂತಲ್ಲೇ ರಾಮಯ್ಯ ಮಲ್ಲಯ್ನ ಸೊರಣೆಯ ಮಾಡು ಮಾಡುತ್ತಲೆ ಸಿದ್ಧರಾಮಯ್ಯನವರು ಶಿವುಲಿಂಗುವಾದರು" ಎಂಬುದಾಗಿ

ಸಿದ್ಧಶೆಟ್ಟರು ಸಿದ್ಧರಾಮನ ಐಕ್ಯವನ್ನು ತಿಳಿಸಿದ್ದಾರೆ. ರಾಘವಾಂಕ ಹೇಳಿದ ಸಿದ್ಧರಾಮನ ಯೋಗಸಮಾಧಿಯ ಚಿತ್ರಣ ಇಲ್ಲಿ ಬಿಂಬಿತವಾಗಿಲ್ಲ.

ಸಿದ್ಧರಾಮನು ಲಿಂಗವಾದದನ್ನು ಕಂಡ ಸಿಸುಮಕ್ಕಳೆಲ್ಲಾ ಕಣ್ಣೀರ ಹಾಕಿ, ಹಾಸಾಸಿ ಅಡ್ಡಬಿದ್ದು ರಾಮಯ್ಯೆಗ್ಗೆ ಶರಣು ಶರಣಾರ್ತಿ ಎಂದರು, ಚಾಮಲಾದೇವಿ ಸಿದ್ಧರಾಮಯ್ಯ ಲಿಂಗವಾದ ವಿಷಯ ತಿಳಿದು ಭಕ್ತಿಯಿಂದ ಬಂದು ನಮಸ್ಕಾರ ಮಾಡಿ, ಸಿದ್ಧರಾಮ ಲಿಂಗಕ್ಕೆ ದೇವಾಲ್ಯ ಕಟ್ಟಿದಳು ಎಂದು ಸಿದ್ಧರಾಮನ ಐಕ್ಯವನ್ನು ಸಿದ್ಧಶೆಟ್ಟರು ತಮ್ಮದೇ ಶೈಲಿಯಲ್ಲಿ ನಿರೂಪಿಸಿದ್ದಾರೆ. ಕೊನೆಯಲ್ಲಿ

**"ಕಾಯಸ್ಯೆತುವಾಗಿ**
**ಕೈಲಾಸಕ್ಕೆ ಹೋಗಿ ಬಂದ**
**ಶರಣರು ಯಾರೂ ಇಲ್ಲ**
**ರಾಮಯ್ಯ ಮಾತ್ರವೆ**
**ಕೈಲಾಸ್ಕೆ ಹೋಗಿ ಮತ್ತೆ**
**ಭೂಮಿಗೆ ಬಂದೋರು**
**ಇಂಥ – ಶರಣಮಾತ್ಮರ**
**ಸೊರಣೆ ಮಾಡಿದೋರ್ಗೆ**
**ಕೈಲಾಸ ಪ್ರಾಪ್ತುವಾಯ್ತದೆ**
**ಶರಣು ಶರಣಾರ್ತಿ" (ಜನಪದ ಶರಣ ಕಾವ್ಯಗಳು ಪುಟ ೨೪೩)**

ಎಂದು ಸಿದ್ಧರಾಮೇಶ್ವರನನ್ನು ನೆನೆದು ಈ ಕಾವ್ಯವನ್ನು ಸಿದ್ಧಶೆಟ್ಟರು ಸಮಾಪ್ತಿಗೊಳಿಸಿದ್ದಾರೆ. ಈ ಕಾವ್ಯ ಹರಿಹರನ ರಗಳೆಗಳ ರೀತಿಯಲ್ಲಿ ವೇಗವಾಗಿ ಸಾಗುತ್ತದೆ. ಓದಲಿಕ್ಕೆ ಬೇಸರವಾಗದ ರೀತಿಯಲ್ಲಿ ಸಿದ್ಧಶೆಟ್ಟರ ದೇಸಿಯ ಭಾಷೆ ಬಳಕೆಯಾಗಿದೆ. ಸೊಗಸಾದ ನಿರೂಪಣೆ ಇಲ್ಲಿದೆ. ಶರಣ ಪರಂಪರೆಯ ಅದ್ವರ್ಯುಗಳಲ್ಲಿ ಒಬ್ಬನಾದ ಸಿದ್ಧರಾಮನನ್ನು ಈ ಕಾವ್ಯ ಭಕ್ತಿಪೂರ್ವಕವಾಗಿ ಕಂಡಿರಿಸಿದೆ. "ಈ ಜನಪದ ಕಾವ್ಯ ಒಂದು ಮಹಾಕಾವ್ಯವೇನೋ ಎಂಬ ಭವ್ಯತೆಯ ಅನುಭವವನ್ನುಂಟುಮಾಡುತ್ತದೆ" ಎಂಬ ಪಿ.ಕೆ ರಾಜಶೇಖರ್ ಅವರ ಮಾತುಗಳು ನಿಜಕ್ಕೂ ಸತ್ಯ. ಪ್ರಸ್ತುತದಲ್ಲಿಯೂ ಜನಮನದಲ್ಲಿ ದೈವೀಸ್ವರೂಪದಲ್ಲಿ ನೆಲೆಗೊಂಡಿರುವ ಸಿದ್ಧರಾಮೇಶ್ವರನ ಜೀವನ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಸಿದ್ಧಶೆಟ್ಟರ ಕಾವ್ಯ ತನ್ನದೇ ಕಥಾರೂಪ, ಶೈಲಿಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದೆ. ಸಿದ್ಧರಾಮನ ಭವ್ಯತೆಯನ್ನು ಜಗತ್ತಿಗೆ ಭಿತ್ತರಿಸಿದೆ.

**ಗ್ರಂಥಋಣ:**


1. ಜನಪದ ಶರಣ ಕಾವ್ಯಗಳು – ಸಂ. ಡಾ. ಪಿ.ಕೆ ರಾಜಶೇಖರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮೊದಲ ಮುದ್ರಣ ೨೦೧೦
2. ಸಿದ್ಧರಾಮೇಶ್ವರ ವಚನ ಸಂಪುಟ – ಸಂ. ಎಸ್ ವಿದ್ಯಾಶಂಕರ, ಕನ್ನಡ ಪುಸ್ತಕ ಪ್ರಾಧಿಕಾರ, ದ್ವಿತೀಯ ಮುದ್ರಣ ೨೦೦೧
3. ರಾಘವಾಂಕ ಕವಿಯ 'ಸಿದ್ಧರಾಮ ಚಾರಿತ್ರ' – ಸಂ. ಪ್ರೊ.ಟಿ ಎಸ್ ವೆಂಕಣ್ಣಯ್ಯ ಮತ್ತು ಡಿ.ಎಲ್ ನರಸಿಂಹಚಾರ್, ಕರ್ಣಾಟಕ ಸಂಘ ಶಿವಮೊಗ್ಗ, ಪ್ರಥಮ ಮುದ್ರಣ ೧೯೪೧
4. ವೀರಶೈವ ಸಾಹಿತ್ಯ ಚರಿತ್ರೆ ಸಂಪುಟ : ಒಂದು : ವಚನ ಸಾಹಿತ್ಯ – ಸಂ. ಡಾ, ಎಸ್.ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ಮೊದಲ ಮುದ್ರಣ ೨೦೧೩